ಇ) ಕರ್ನಾಟಕ ರಾಜ್ಯದಲ್ಲಿ ತಾಲ್ಲೂಕು ತಹಶೀಲ್ದಾರರು ಜಾತಿ ಪ್ರಮಾಣ ಪತ್ರ ನೀಡಲು ಅಧಿಕಾರ ಹೊಂದಿರುತ್ತಾರೆ. ತಾಲ್ಲೂಕು ತಹಶೀಲ್ದಾರರು ಜಾತಿ ಪ್ರಮಾಣ ಪತ್ರಗಳನ್ನು ನೀಡುವುದಕ್ಕೆ ನಿರಾಕರಿಸಿದಲ್ಲಿ ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮೀಷನರ್)ರವರಿಗೆ ಮನವಿ ಸಲ್ಲಿಸಬಹುದು.

ಅದೇ ರೀತಿ ಸರ್ಕಾರಿ ಉದ್ಯೋಗಕ್ಕೆ ಸೇರುವ ಮುಂಚೆ ಜಾತಿ ಪ್ರಮಾಣ ಪತ್ರಗಳನ್ನು ಮತ್ತೊಮ್ಮೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಜಾತಿ ಪರಿಶೀಲನಾ ಸಮಿತಿಯು ಪರಿಶೀಲಿಸಿ ಸಿಂಧುತ್ವ ಪ್ರಮಾಣ ಪತ್ರ ನೀಡುತ್ತದೆ. ಒಂದು ವೇಳೆ ಸಿಂಧುತ್ವ ಪ್ರಮಾಣ ಪತ್ರ ನೀಡುವಲ್ಲಿ ಜಾತಿ ಪರಿಶೀಲನಾ ಸಮಿತಿಯು ನಿರಾಕರಿಸಿದ್ದಲ್ಲಿ, ಅವರು ರಾಜ್ಯದ ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು. ಆಯುಕ್ತರ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿ ಪ್ರಶ್ನಿಸಬಹುದು. ಆದುದರಿಂದ ಎಲ್ಲಾ ವಿದ್ಯಾರ್ಥಿಗಳು ನೇರವಾಗಿ ನ್ಯಾಯಾಲಯಕ್ಕೆ ಮೊರೆ ಹೋಗುವ ಅವಶ್ಯಕತೆಯಿರುವುದಿಲ್ಲ.

ಬಾಡಿಗೆ ಕಟ್ಟಡದಲ್ಲಿರುವ ಅಂಗನವಾಡಿ ಕೇಂದ್ರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 177 (333)

ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ)

ಉತ್ತರಿಸುವ ಸಚಿವರು : ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಪ್ರಶ್ನೆಗಳು:–

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಸ್ವಂತ ಅಂಗನವಾಡಿ ಕಟ್ಟಡಗಳನ್ನು ಹೊಂದಿರುವ ಕೇಂದ್ರಗಳ ಸಂಖ್ಯೆ ಎಷ್ಟು; ಮತ್ತು ಎಷ್ಟು ಕಟ್ಟಡಗಳು ಬಾಡಿಗೆ ಆಧಾರದಲ್ಲಿ ನಡೆಯುತ್ತಿವೆ? ಅಂಗನವಾಡಿ ಕೇಂದ್ರಗಳ ಕೇಂದ್ರವಾರು ವಿವರ ನೀಡುವುದು;

ಇ) ಅನೇಕ ಅಂಗನವಾಡಿ ಕೇಂದ್ರಗಳು ಮಲೆನಾಡಿನಲ್ಲಿ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಎಷ್ಟು ಅಂಗನವಾಡಿ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ ಅವುಗಳ ದುರಸ್ತಿಗೆ ಏನು ಕ್ರಮ ಕೈಗೊಳ್ಳಲಾಗಿದೆ; (ಅಂಗನವಾಡಿ ವಿವರ ಪ್ರತಿಯೊಂದು ಅಂಗನವಾಡಿಯ ಬಗ್ಗೆ ವರದಿ ನೀಡುವುದು);

ಈ) ಸ್ವಂತ ಕಟ್ಟಡಗಳಿಲ್ಲದಿದ್ದ ಅಂಗನವಾಡಿ ಕೇಂದ್ರಗಳೆಷ್ಟು; ಮಿನಿ ಅಂಗನವಾಡಿ ಕಟ್ಟಗಳೆಷ್ಟು;

ಉ) ಹೊಸ ಕಟ್ಟಡಗಳನ್ನು ಎಲ್ಲೆಲ್ಲಿ ಕಟ್ಟಲಾಗುತ್ತಿದೆ. ಒದಗಿಸಿರುವ ಅನುದಾನವೆಷ್ಟು? ಪೂರ್ಣ ವಿವರ ನೀಡುವುದು;

ಊ) ಅಂಗನವಾಡಿ ಕಾರ್ಯಕರ್ತೆಯರ ಹೆಸರು ಸಹಿತ ವಿವರ ನೀಡುವುದು.

ಉತ್ತರಗಳು:–

ಅ) ಶಿವಮೊಗ್ಗ ಜಿಲ್ಲೆಯಲ್ಲಿ 2415 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ವಿಧಾನಸಭಾ ಕ್ಷೇತ್ರವಾರು ವಿವರವನ್ನು ಅನುಬಂಧ –1 ರಲ್ಲಿ ಒದಗಿಸಲಾಗಿದೆ.

ಆ) 1413 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿದ್ದು, ವಿವರ ಅನುಬಂಧ –2ರಲ್ಲಿ ಒದಗಿಸಲಾಗಿದೆ. 298 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಂಗನವಾಡಿ ಕೇಂದ್ರವಾರು ವಿವರ ಅನುಬಂಧ –3ರಲ್ಲಿ ಒದಗಿಸಲಾಗಿದೆ.

ಇ) ಹೌದು.

433 ಅಂಗನವಾಡಿ ಕಟ್ಟಡಗಳ ದುರಸ್ತಿಗೆ ಜಿಲ್ಲಾ ಪಂಚಾಯಿತಿಗೆ ಪ್ರಸ್ತಾವನೆ ಸಲ್ಲಿಸಿದೆ.

ವಿವರ ಅನುಬಂಧ –4ರಲ್ಲಿ ಒದಗಿಸಲಾಗಿದೆ.

ಈ) 717 ಅಂಗನವಾಡಿ ಕೇಂದ್ರಗಳಿಗೆ ಹಾಗೂ 285 ಮಿನಿ ಅಂಗನವಾಡಿ

ಕಟ್ಟಡಗಳಿಗೆ ಸ್ವಂತ ಕಟ್ಟಡಗಳಿರುವುದಿಲ್ಲ.

ಊ) ಹೊಸ ಕಟ್ಟಡಗಳನ್ನು ನಿರ್ಮಿಸುತ್ತಿರುವ ಸ್ಥಳ, ಒದಗಿಸಿರುವ ಅನುದಾನದ ವಿವರ ಅನುಬಂಧ –5 ರಲ್ಲಿ ಒದಗಿಸಲಾಗಿದೆ.

ಋ) ಅಂಗನವಾಡಿ ಕಾರ್ಯಕರ್ತೆಯರ ಹೆಸರು ಸಹಿತ ವಿವರವನ್ನು ಅನುಬಂಧ –6ರಲ್ಲಿ ಒದಗಿಸಲಾಗಿದೆ.

ಮೋರಾರ್ಜಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಕಟ್ಟಡಗಳ ಕಾಮಗಾರಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 178 (334)

ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ)

ಉತ್ತರಿಸುವ ಸಚಿವರು : ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)

ಪ್ರಶ್ನೆಗಳು:–

ಅ) ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡಲು ಪ್ರತಿ ಕಟ್ಟಡಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. ಈ ಕಟ್ಟಡಗಳ ನಿರ್ಮಾಣ ಯಾವ ಏಜನ್ಸಿ/ ಗುತ್ತಿಗೆದಾರರಿಗೆ ವಹಿಸಲಾಗಿದೆ (ವಿವರ ನೀಡುವುದು);

ಆ) ಭೂಸೇನಾ ನಿಗಮ ಮತ್ತು ನಿರ್ಮಿತಿ ಕೇಂದ್ರಗಳು ಸರ್ಕಾರದ ಅಂಗಸಂಸ್ಥೆಗಳೆ; ಇವು ಟೆಂಡರ್‌ನಲ್ಲಿ ಭಾಗವಹಿಸದೇ ಇದ್ದರೂ ಈ ಸಂಸ್ಥೆಗಳಿಗೆ ಕಾಮಗಾರಿ ವಹಿಸಲು ಕಾರಣವೇನು; ಪ್ರತಿ ಸಂಸ್ಥೆಯ ತಾಂತ್ರಿಕ ಮತ್ತು ಇತರೆ ಸಿಬ್ಬಂದಿ ವಿವರ ನೀಡುವುದು.

ಇ) ಸಾವಿರಾರು ಕೋಟಿ ವೆಚ್ಚದ ಈ ಕಟ್ಟಡಗಳ ಮೇಲ್ವಿಚಾರಣೆಗೆ ಯಾವ ಯಾವ ಹಂತದ ಅಧಿಕಾರಿಗಳು ತಂತ್ರಜ್ಞರು, ನೌಕರರು, ಇತರೆ ಸಿಬ್ಬಂದಿ ವರ್ಗ ಕೆಲಸ ಮಾಡುತ್ತಿದ್ದಾರೆ: ಅವರ ಹೆಸರು